ನಾಲಿಗೆ ಹೊರತೆಗೆದು ನಕ್ಕಿತು ಹಾವಿನ ಮರಿ.

ರುದ್ರಪ್ಪ ಮಗನಿಗೆ ನಾಮಕರಣ ಇಟ್ಟುಕೊಂಡು ಇಡೀ ಊರಿಗೇ ಊಟಕ್ಕೆ ಕರೆದ ವಿಷಯ ಹೇಳಲು ಹೆಂಡತಿಯ ರೂಮಿಗೆ ಬಂದ. ಅಮ್ಮನ ಸುತ್ತಲೂ ಸುತ್ತುತ್ತ ಆಟವಾಡುತ್ತಿದ್ದ ಮರಿ ರುದ್ರಪ್ಪನ ಚಪ್ಪಲಿಯ ಚರ ಪರ ಸದ್ದು ಕೇಳಿದೊಡನೆಯೇ ಛಂಗನೇ ಕಿಟಕಿಯತ್ತ ಜಿಗಿದು ಸರ್ರನೇ ಹಾರಿ ಹೋಯಿತು. ಹಾವು ಹಾರುವುದನ್ನು ನೋಡಿದ ಸಾವಕ್ಕ ಕಂಬದಂತೆ ಅವಕ್ಕಾಗಿ ನಿಂತಳು. ಖಾಂಡವ ವನವನ್ನು ದಹಿಸಿದಾಗ ಸರ್ಪಗಳೆಲ್ಲ ಆಹುತಿಯಾಗಿ ತಕ್ಷಕ ಹಾರಿ ಹೋಗಿ ತಪ್ಪಿಸಿಕೊಂಡ ಎಂದು ದೊಡ್ಡಾಟದಲ್ಲಿ ಕೇಳಿದ್ದಳು. ಈಗ ತನ್ನ ಮಗನೇ ಹಾರಿ ಹೋದಾಗ ಅವಾಕ್ಕಾಗಿ ನಿಂತುಬಿಟ್ಟಳು!

ರುದ್ರಪ್ಪ ಮಗನಿಗೆ ಪರಮೇಶ್ವರ ಎಂದು ಹೆಸರಿಟ್ಟ. ಪರಮೂ ಪರಮೂ ಎಂದೂ ಕರೆದ. ಅಂದು ರಾತ್ರಿ 12 ಗಂಟೆ ನಾಮಕರಣಕ್ಕೆಂದು ಕಟ್ಟಿ ಸಿಂಗರಿಸಿದ್ದ ತೊಟ್ಟಿಲು ಮತ್ತೆ ತೂಗುತ್ತಿತ್ತು. ಗುನುಗುನು ಹಾಡಿನೊಂದಿಗೆ ಮತ್ತೊಂದು ನಾಮಕರಣವಾಯಿತು. ಸಾವಕ್ಕ ಹಾವಿನ ಮರಿಗೆ ನಿಂಗಪ್ಪನೆಂದು ಹೆಸರಿಟ್ಟಳು. ನಿಂಗಪ್ಪ ಆಕೆಯ ಅಜ್ಜನ ಹೆಸರು. ಗಟ್ಟಿ ಆಳು ಆಕೆಯ ಅಜ್ಜ 100 ವರ್ಷ ಬದುಕಿದ್ದ. ಪರಮಪ್ಪ ನಿಂಗಪ್ಪ ಸಾವಕ್ಕನ ಎರಡು ಕಣ್ಣುಗಳಾದವು. ತಾಯ ಆರೈಕೆಯಲ್ಲಿ ಬೆಳೆಯತೊಡಗಿದವು. ಮನೆಯವರಿಗೆ ಗೊತ್ತಾಗದಂತೆ ನಿಂಗಪ್ಪ ಕಿಟಕಿಯಿಂದ ಬಂದು ಹೋಗಿ ಮಾಡುತ್ತಿದ್ದ. ತೊಟ್ಟಿಲಲ್ಲಿ ಆಡುತ್ತ ಪರಮ ಕೂಡ ನಿಂಗನ ಹಾದಿ ಕಾಯುತ್ತಿದ್ದ. ನಿಂಗಣ್ಣ ಕೋಣೆ ತುಂಬ ಟಣ್ ಟಣ್ ಎಂದು ಹಾರುತ್ತ ಜಿಗಿದಾಡುತ್ತಿದ್ದ. ಪರಮಣ್ಣ ಅದನ್ನು ನೋಡಿ ಕೇಕೆ ಹಾಕಿ ನಗುತ್ತಿದ್ದ. ಇವರಿಬ್ಬರ ಆಟ ನೋಡಿ ಸಾವಕ್ಕ ಮನದಣಿಯೆ ನಗುತ್ತಿದ್ದಳು.

***

ಒಂದು ದಿನ ಹೀಗೆಯೇ ಪರಮಪ್ಪ ನಿಂಗಪ್ಪ ಆಡ್ತಾ ಇದ್ರು. ನಿಂಗಪ್ಪ ಛಂಗನೆ ಮೇಲೆ ಹಾರಿ ಕೆಳಗೆ ಬೀಳ್ತಿದ್ದ. ಪರಮಪ್ಪ ಕೇಕೆ ಹಾಕಿ ನಗುತಿದ್ದ. ರುದ್ರಪ್ಪ ಥಟ್ಟನೆ ಬಾಣಂತಿ ಕೋಣೆಯೊಳಗೆ ಬಂದುಬಿಟ್ಟ. ನಿಂಗಪ್ಪ ಪರಮಪ್ಪನ ಆಟ ನೋಡಿ ಕೆಂಡಾಮಂಡಲವಾದ. ಸಿಟ್ಟಿನಿಂದ ನಿಂಗಪ್ಪನ ಬಾಲ ಹಿಡಿದು ಗರಗರ ತಿರುಗಿಸಿ ರಪರಪನೇ ನೆಲಕ್ಕೆ ಬಾರಿಸತೊಡಗಿದ. ಸಿಟ್ಟಿನಿಂದ ಭುಸಗುಟ್ಟತೊಡಗಿದ ನಿಂಗಪ್ಪ. ಸಾವಕ್ಕ ಹೆದರಿ ಹೋದಳು. ನಿಂಗಣ್ಣ ಅಪ್ಪಿಗೆ ಕಡಿಬ್ಯಾಡ, ನನ್ನ ಮಾಂಗಲ್ಯ ಉಳಸಪ್ಪಾ ಎಂದು ಅಳತೊಡಗಿದಳು. ಅವ್ವನಿಗಾಗಿ ನಿಂಗಪ್ಪ ಶಾಂತವಾದ. ರುದ್ರಪ್ಪ ನೆಲಕ್ಕೆ ಬಡಿಬಡಿದಾಗ ಸುಸ್ತಾದ ನಿಂಗಪ್ಪ ನೆಲಕ್ಕೊರಗಿದ. ನಿಂಗಪ್ಪ ಸತ್ತು ಹೋದ ಎಂದುಕೊಂಡು ಹೆಂಡತಿಯನ್ನೂ ದನ ಬಡಿದಂತೆ ಬಡಿದ ರುದ್ರಪ್ಪ ತನ್ನ ರುದ್ರಾವತಾರ ಪ್ರದರ್ಶಿಸಿ ಹೊರಗೋದ.

ಬಡಿಸಿಕೊಂಡು ಮೂಲೆಯಲ್ಲಿ ಬಿದ್ದಿದ್ದ ಸಾವಕ್ಕನಿಗೆ ಮೇಲೇಳಲು ಆಗಲಿಲ್ಲ, ಆದ್ರೂ ಆಕೆಗೆ ತನ್ನ ಚಿಂತೆ ಇಲ್ಲ, ನಿಂಗಣ್ಣನದೇ ಚಿಂತೆ, ತೆವಳಿ ಸರಿಯುತ್ತ ನಿಂಗಣ್ಣನತ್ತ ಬಂದಳು. ಸುಸ್ತಾಗಿ ನಿಂಗಣ್ಣ ನೆಲಕ್ಕೊರಗಿದ್ದ. ಸಾವಕ್ಕ ಮೆಲ್ಲಗೆ ಅವನನ್ನು ಎತ್ತಿ ಉಡಿಯಲ್ಲಿ ಹಾಕಿಕೊಂಡಳು. ಗಾಯ ಆದಲ್ಲೆಲ್ಲ ಔಷಧಿ ಹಚ್ಚಿದಳು. ಉಡಿಯಲ್ಲಿ ಬೆಚ್ಚಗೆ ಮಲಗಿಸಿ ಕೊಂಡಳು. ಸುಸ್ತಾಗಿದ್ದ ನಿಂಗಣ್ಣ ತಾಯಿ ಆರೈಕೆ ತಾಯಿ ಪ್ರೀತಿಯಲ್ಲಿ ಮುಲುಗುತ್ತ ಮಲಗಿಕೊಂಡ. ಸಾವಕ್ಕನಿಗೂ ಏಳಲಾಗದೇ ಅಲ್ಲೇ ಬೋರಲು ಬಿದ್ದುಕೊಂಡಳು. ಒದರಾಟ ಚೀರಾಟಕ್ಕೆ ಹೆದರಿದ ಪರಮಪ್ಪ ಅತ್ತೂ ಅತ್ತೂ ಸುಸ್ತಾಗಿ ತೊಟ್ಟಿಲಲ್ಲೇ ಮಲಗಿಕೊಂಡ.

ತಾಯ ಆರೈಕೆ ನಿಂಗಣ್ಣನಿಗೆ ಮತ್ತೆ ಚೈತನ್ಯ ತುಂಬಿತು. ಎಚ್ಚರಾದಾಗ ಸಿಟ್ಟಿನಿಂದ ಫೂತ್ಕರಿಸಿ ಎದ್ದು ನಿಂತ. ಅವನ ಫೂತ್ಕಾರಕ್ಕೆ ಎಚ್ಚರಾದಳು ಸಾವಕ್ಕ. ಕಣ್ಣು ತೆಗೆದು ನೋಡುತ್ತಾಳೆ. ಬಾಲದ ತುದಿಯ ಮೇಲೆ ನೇರವಾಗಿ ನಿಂಗಪ್ಪ ಎದ್ದು ನಿಂತಿದ್ದಾನೆ. ಬಾಯಿಯ ಪಕ್ಕದಲ್ಲಿದ್ದ ಮಚ್ಚೆ ಕೆಂಪಗೆ ಹೊಳೆಯುತ್ತಿದೆ. ಹಾವು ಬಾಲದ ತುದಿ ಮೇಲೆ ನೇರವಾಗಿ ನಿಂತು, ದೊಡ್ಡದೊಡ್ಡದಾಗಿ ನಾಲಿಗೆ ತೆಗೆದು ಬುಸುಗುಡುತ್ತ ನಿಂತಿದ್ದನ್ನು ನೋಡಿ ಸಾವಕ್ಕ ಮರಗಟ್ಟಿ ಹೋದಳು. ನಿಂಗಪ್ಪನ ಫೂತ್ಕಾರದಲ್ಲಿ ಬೆಂಕಿಯ ಅಲೆಗಳು ತೇಲಿ ಬರುತ್ತಿವೆ. ದೇಹ ಬೆಳ್ಳಿಯ ಖಡ್ಗದಂತೆ ಫಳಫಳನೇ ಹೊಳೆಯುತ್ತಿದೆ. ಮೈ ಮೇಲಿನ ಕಪ್ಪು ಚಿಕ್ಕೆಗಳು ವಜ್ರದುಂಡೆಗಳಾಗಿವೆ. ಎದ್ದು ನಿಂತ ಸಾವಕ್ಕ ಹೆದರಿ ಧೊಪ್ಪನೆ ನೆಲಕ್ಕೆ ಬಿದ್ದಳು. ಬಿದ್ದಲ್ಲಿಂದಲೇ ಕೈ ಮುಗಿದಳು. 'ನಿಂಗಣ್ಣ, ನಿನ್ನ ಸಾದಾ ರೂಪಕ್ಕ ಬಾ. ನನಗ ನೋಡಾಕ ಆಗವಲ್ಲು, ಸಿಟ್ಟಿನ ಭರದಾಗ ನನ್ನ ತಾಳಿ ಭಾಗ್ಯ ಕಿತಗೋಬ್ಯಾಡಾ'.

ಭೋರ್ಯಾಡಿ ಅಳತೊಡಗಿದಳು, ತಾಯ ಕಣ್ಣೀರು ನಿಂಗಣ್ಣನ ಕೋಪ ಕಳೆಯಿತು. ನೆಲಕ್ಕಿಳಿದ ನಿಂಗಪ್ಪ ಅವ್ವನನ್ನು ಮೈ ದಡವಿ ರಮಿಸಿದ. ಸಾವಕ್ಕ, 'ತಮ್ಮಾ, ಇಲ್ಲೆಲ್ಲ ಕಟಕರ ತುಂಬ್ಯಾಕ, ನೀ ಈ ಕಡೆಗೆ ಬರಬ್ಯಾಡಾ ಎಲ್ಲ್ಯಾರೆ ಕಾಡು ಸೇರಿಕೋ ಹೋಗಪ್ಪಾ ಹೋಗು' ಎಂದು ಆದೇಶ ನೀಡಿದಳು. ನಿಂಗಪ್ಪ ಸರ್ರನೇ ಹಾರಿಹೊರಗೋದ.

***

ಬಹಳಷ್ಟು ದಿನ ಕಳೆದವು, ವರ್ಷಗಳು ಕಳೆದವು. ಪರಮ ದೊಡ್ಡವನಾಗಿದ್ದ. ತಂದೆಯ ಎಲ್ಲ ಠೀವಿ ತನ್ನೊಳಗೆ ಆವಾಹಿಸಿಕೊಂಡಿದ್ದ. ಮುಂಜಾನೆ ಸಾವಕ್ಕ ಥಳಿ ರಂಗೋಲಿಗೆಂದು ಬಾಗಿಲು ತೆರೆದು ಹೊರಗೆ ಹೆಜ್ಜೆ ಇಟ್ಟೊಡನೆ ಕಾಲಿನ ಮೇಲೆ ದೊಪ್ಪನೆ ಏನೋ ಬಂದು ಬಿತ್ತು. ನೋಡುತ್ತಾಳೆ, ನಿಂಗಪ್ಪ! ಬಾಯಿಯ ಪಕ್ಕದಲ್ಲಿ ಮಚ್ಚೆ ಗುರುತು ಹೇಳಿತು. ನಿಂಗಪ್ಪ ಜೊತೆಗೆ ಇನ್ನೊಂದು ಹಾವು ಕೂಡ ಇತ್ತು. ಎರಡೂ ಬಂದು ಸಾವಕ್ಕನ ಪಾದ ಮುಟ್ಟಿ ನಮಸ್ಕರಿಸಿದವು. ಜೋಡಾಗಿ ಮೆಲ್ಲಗೆ ಎದ್ದು ನಿಂತವು, ಒಂದಕ್ಕೊಂದು ಹೊಸೆದುಕೊಳ್ಳುತ್ತ ಸಾವಕ್ಕನ ಸುತ್ತಲೂ ನರ್ತಿಸಿದವು. ಸಾವಕ್ಕನಿಗೆ ಗೊತ್ತಾಯಿತು ನಿಂಗಪ್ಪನ ಜೊತೆಗಿರುವವಳು ತನ್ನ ಸೊಸೆ ಎಂದು.

ಥಟ್ಟನೇ ಹೊರಗಿನಿಂದ ಮುಂಬಾಗಿಲ ಚಿಲಕ ಹಾಕಿದಳು. ರಂಗೋಲಿಯ ತಟ್ಟೆಯಲ್ಲಿಯೇ ಕದಲಾರತಿ ಹಾಕಿ ಇಬ್ಬರಿಗೂ ಆರತಿ ಮಾಡಿದಳು. ತುಳಸಿಯ ಮುಂದೆ ದೀಪ ಹಚ್ಚಿಟ್ಟಳು. ದೊಡ್ಡ ರಂಗೋಲಿ ಹಾಕಿ ನಡುವೆ ಕುಳಿತು ಕೊಳ್ಳಲು ಸೂಚಿಸಿದಳು. ಆರತಿ ಮಾಡಿ ದೃಷ್ಟಿ ತೆಗೆದಳು.

ಸೊಸೆ ಮುಂದು ಬಂದವಳೇ ಒಂದಿಷ್ಟು ಅತ್ತೆಯ ಉಡಿಗೆ ಹಾಕಿದಳು. ಮುತ್ತು ವಜ್ರ! ನಿಂಗಪ್ಪ ಮತ್ತು ಆತನ ಹೆಂಡತಿ ತೋರುತ್ತಿದ್ದ ಪ್ರೀತಿಗೆ ಸಾವಕ್ಕನ ಕಣ್ಣು ತುಂಬಿ ಬಂತು. ಧಾರೆ ಧಾರೆ ನೀರು !. ಪ್ರೀತಿ ಇರುವೆಡೆಗೆ ಬಾಳುವಂತಿಲ್ಲ. ಬಾಳು ಇರುವೆಡೆಗೆ ಪ್ರೀತಿ ಇಲ್ಲ.

ಸಾವಕ್ಕ ಇನ್ನೊಬ್ಬ ಮಗ ಪರಮಪ್ಪನಿಗೂ ಮದುವೆ ಮಾಡಿದ್ದಳು. ಸೊಸೆ ಶಾಂತವ್ವ. ರುದ್ರಪ್ಪ ರುದ್ರನ ಪಾದ ಸೇರಿ ಎಷ್ಟೋ ವರ್ಷ ಆಗಿತ್ತು. ಸಾವಕ್ಕ ಮೊದಲೇ ಮಾತನಾಡುವುದು ಕಡಿಮೆ. ಈಗಂತೂ ಮಾತೇ ಮರೆತು ಹೋದಂತೆ ಆಗಿತ್ತು. ಪರಮಪ್ಪನಂತೂ ಎಂದೂ ಪ್ರೀತಿಯಿಂದ ಅಮ್ಮನ ಜೊತೆ ಮಾತನಾಡಿರಲಿಲ್ಲ. ತನ್ನ ಡ್ರೆಸ್ಸು, ಮೀಸೆ, ಚಪ್ಪಲಿ ವಾಚು ಎಂದು ಠೀವಿಯಿಂದ ಬದುಕುವುದರಲ್ಲೇ ಅವನ ಸಮಯ ಕಳೆದು ಹೋಗುತ್ತಿತ್ತು. ಗಂಡನಿಗಿಂತಲೂ ಸೊಗಡು ಶಾಂತವ್ವ. ಚಂದದ ರೇಶ್ಮೆ ಸೀರೆ ಉಟ್ಟು ಬಾಯಿ ತುಂಬ ಎಲೆ ಅಡಿಕೆ ತುಂಬಿಕೊಂಡು ಕುಳಿತಳೆಂದರೆ ತೀರಿತು. ಮನೆ ಕೆಲಸ, ದಿನ ನಿತ್ಯವೂ ಸಾವಕ್ಕನೇ ಮಾಡಬೇಕಾಗುತ್ತಿತ್ತು. ಇಡೀ ದಿನ ದುಡಿದರೂ ಮಗ ಸೊಸೆಯ ಬಾಯಲ್ಲಿ ಒಂದು ಒಳ್ಳೆಯ ಮಾತು ಬರುತ್ತಿರಲಿಲ್ಲ.

ಪರಮ ದಿನವೂ ಏನಾದರೊಂದು ತಕರಾರು ತೆಗೆಯುತ್ತಿದ್ದ, ಕೈಗೆ ಸಿಕ್ಕದನ್ನು ತಾಯಿಯ ಮೇಲೆ ಎಸೆಯುತ್ತಿದ್ದ. ಅನೇಕ ಬಾರಿ ಹೊಡೆದದ್ದೂ ಇದೆ. ಸಾವಕ್ಕ ಮರ್ಯಾದೆಗಂಜಿ ಎಲ್ಲವನ್ನೂ ನುಂಗಿಕೊಂಡು ಇರುತ್ತಿದ್ದಳು.

***

ಪರಮಪ್ಪನ ಆಸೆ ಮೀರುತ್ತಲೇ ಹೋಯಿತು. ಸೊಗಡು ಶಾಂತವ್ವ ಗಂಡನ ಎಲ್ಲ ಅನ್ಯಾಯಕ್ಕೂ ನೆರವಾಗುತ್ತ ಸಾಧ್ಯವಾದಷ್ಟು ಹಣ. ಬಂಗಾರ, ಅತ್ತೆಯಿಂದ ಪಡೆಯುತ್ತ ಹೋದಳು. ಒಂದು ದಿನ ಎಲ್ಲವೂ ಖಾಲಿಯಾಯಿತು ಈಗಲಾದರೂ ಮಗ ಸೊಸೆ ತನ್ನನ್ನು ನೆಮ್ಮದಿಯಾಗಿ ಇರಲು ಬಿಡುತ್ತಾರೆ ಎಂದು ಅಂದುಕೊಂಡಳು ಶಾಂತವ್ವ. ಆದರೆ ಆಕೆ ಬಯಸಿದ ಈ ನೆಮ್ಮದಿ ಅವಳಿಗೆ ಸಿಗಲೇ ಇಲ್ಲ. ಪರಮಪ್ಪನ ಕಣ್ಣು ಹೊಲದ ಮೇಲೆ ಬಿದ್ದಿತ್ತು. ಪರಮನ ಷಡ್ಯಂತ್ರ ತಯಾರಾಯಿತು.

'ಯವ್ವಾ ಬೇ ಯವ್ವಾ ಎಲ್ಲಿ ಅದೀ ಬೇ' ಪರಮ ಕೂಗುತ್ತ ಬಂದಾಗ ಸಾವಕ್ಕನಿಗೆ ಅಚ್ಚರಿಯಾಯಿತು. ಪರಮ ಅಮ್ಮನನ್ನು ಪ್ರೀತಿಯಿಂದ 'ಯವ್ವಾ' ಎಂದು ಕರೆದು ತುಂಬಾ ವರ್ಷವಾಗಿತ್ತು. ರಪ ರಪನೇ ರೊಟ್ಟಿ ಬಡಿಯುತ್ತ ಒಲೆಯ ಮುಂದೆ ಕುಳಿತಿದ್ದಳು.

'ಯವ್ವಾ ರೊಟ್ಟಿ ಮಾಡೋದು ಮುಗ್ಯಾಣ ಎಲ್ಲಾ ಬುತ್ತಿಗಂಟ ಕಟ್ಟಿ ಇವತ್ತ ಹೊಲದಾಗ ಊಟಾ ಮಾಡೋನು'.

ಮಗನ ಮಾತು ಕೇಳಿ ಸಾವಕ್ಕನಿಗೆ ಆಶ್ಚರ್ಯವಾಯಿತು. ಏನೂ ಮಾತನಾಡಲು ಧೈರ್ಯವಾಗಲಿಲ್ಲ.

'ಅತ್ತಿ, ಏನೇನ ಅಡಿಗಿ ಮಾಡಿದಿ ತಾ ಈ ಕಡಿಗಿ, ನಾನೇ ಬುತ್ತಿ ಕಟ್ಟತೀನಿ'.

ಸೊಸೆ ಕೆಲಸದಲ್ಲಿ ಕೈ ಜೋಡಿಸಿದ್ದು ಇದೇ ಮೊದಲ ಬಾರಿಗೆ,

ಸಾವಕ್ಕನಿಗೆ ಎಲ್ಲವೂ ವಿಚಿತ್ರವೆನಿಸತೊಡಗಿತು. ಮಗ ಸೊಸೆಯರ ವರ್ತನೆ ಅರಗಿಸಿಕೊಳ್ಳಲು ಆಗಲಿಲ್ಲ. ಇದೇನು ಬಗೆ ಎಂದು ಸಾವಕ್ಕ ವಿಚಾರ ಮಾಡುತ್ತ